# ಎಂ.ಪಿ.ಎಂ. ಕಾಲೇಜಿನಲ್ಲಿ ವಿಶೇಷ ಉಪನ್ಯಾಸ

ಕಾರ್ಕಳ: ಮೂಡುಬಿದಿರೆಯ ಎಂಐಟಿಇ ವಿದ್ಯಾಸಂಸ್ಥೆ ಹಾಗೂ ಎಂಪಿಎಂ ಕಾಲೇಜಿನ ನಡುವೆ 2018ರಲ್ಲಿ ಆದ ಒಪ್ಪಂದದ (ಎಂಒಯು) ಸಲುವಾಗಿ ಶೈಕ್ಷಣಿಕ ಸಂಬಂಧ ಬೆಳೆಯುವ ಅವಕಾಶ ದೊರೆತಿದೆ. ಈ ಎಂಒಯು ಅಡಿ ಶೈಕ್ಷಣಿಕ ಸಂಪನ್ಮೂಲಗಳು ಸಂಸ್ಥೆಗಳ ನಡುವೆ ಪರಸ್ಪರ ಹಂಚಿಕೊಳ್ಳಲಿದ್ದು, ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಮುಖ ವಿಷಯಗಳ ಮೇಲೆ ಕಲಿಕೆಯ ಅವಕಾಶ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಎಂಪಿಎಂ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮೈಟ್ ಎಂಬಿಎ ವಿಭಾಗದ ಮುಖ್ಯಸ್ಥ ಪ್ರೊ. ಜಯದೇವ ಪ್ರಸಾದ್, ಡೆವಲಪಿಂಗ್ ಟ್ರೈಟ್ಸ್ ಆ್ಯಂಡ್ ಸ್ಕಿಲ್ ಫಾರ್ ಸಕ್ಸಸ್ ಇನ್ ಕ್ಯಾರಿಯರ್ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀವರ್ಮಾ ಅಜ್ರಿ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಪ್ರೊ. ಜ್ಯೋತಿ ಉಪಸ್ಥಿತರಿದ್ದರು. ನಾವಿನ್ಯ ಕೂಟದ ಸಂಚಾಲಕಿ ಪ್ರೊ. ದಿವ್ಯಪ್ರಭು ಸ್ವಾಗತಿಸಿದರು. ಸೌಮ್ಯ ಕಾರ್ಯಕ್ರಮ ನಿರೂಪಿಸಿದರು. ತೃತೀಯ ಬಿಬಿಎಯ ಒಟ್ಟು 60 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಬಳಿಕ ವಿದ್ಯಾರ್ಥಿಗಳನ್ನು ಮೈಟ್ ಕ್ಯಾಂಪಸ್‌ಗೆ ಕರೆದೊಯ್ದು ಗಣಕಯಂತ್ರ ಲ್ಯಾಬ್‌ನಲ್ಲಿ ತಾಂತ್ರಿಕ ತರಬೇತಿ ನೀಡಲಾಯಿತು.